**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಹಾಗು ವಿಶೇಷ ನ್ಯಾಯಾಲಯ. ಹಾವೇರಿ**
**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ಸಿ/ಎಸ್.ಟಿ.61/2025**

**ಪಿರ್ಯಾದಿಃ** ಆಡೂರು ಪೊಲೀಸ್ ಠಾಣೆ

**–ವಿರುದ್ಧ–**

**ಆರೋಪಿತರುಃ**

1. ಫಕ್ಕೀರಪ್ಪ ಈಶ್ವರಪ್ಪ ದೇವಿಹೊಸೂರು @ದೇವಸೂರು
   ವಯಸ್ಸುಃ 41 ವರ್ಷ,
2. ಅಜ್ಜಪ್ಪ ಪರಮಪ್ಪ ಬೇವಿನಹಳ್ಳಿ
   ವಯಸ್ಸುಃ 42 ವರ್ಷ,
3. ಭರಮಪ್ಪ ಫಕ್ಕೀರಪ್ಪ ಕೊರಡೂರು
   ವಯಸ್ಸುಃ 38 ವರ್ಷ,
4. ಅಣ್ಣಪ್ಪ ಥಾಯನಗೌಡ ಪಾಟೀಲ್
   ವಯಸ್ಸುಃ 35 ವರ್ಷ,
5. ಮಂಜಪ್ಪ ಭರಮಪ್ಪ ಮೆಳ್ಳಳ್ಳಿ
   ವಯಸ್ಸುಃ 43 ವರ್ಷ,
6. ರಮೇಶ ನಿಂಗಪ್ಪ ನೀರುಳ್ಳಿ @ನೀರೊಳ್ಳಿ
   ವಯಸ್ಸುಃ 55 ವರ್ಷ,
7. ಸೌಭಾಗ್ಯ ಫಕ್ಕೀರಪ್ಪ ದೇವಿಹೊಸೂರು @ ದೇವಸೂರ
   ವಯಸ್ಸುಃ 35 ವರ್ಷ,

ಎಲ್ಲರೂ ಸಾಃ ಚಿಕ್ಕಹುಲ್ಲಾಳ, ತಾಃ ಹಾನಗಲ್

## ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ದಿನಾಂಕಃ07.10.2025 ರಂದು ಸಂಜೆ 5.30 ಗಂಟೆ ಸುಮಾರಿಗೆ ಆರೋಪಿತರಾದ ನೀವು ಚಾಸಾ-1, 6 ಮತ್ತು 7 ರವರಿಗೆ ಸೇರಿದ ಚಿಕ್ಕಹುಲ್ಲಾಳ ಗ್ರಾಮದ ಸರ್ವೇ ನಂ.9/1, 9/2 ರ ಖುಲ್ಲಾ ಜಾಗದಲ್ಲಿ ಸಲಿಕೆ, ಗುದ್ಲಿ, ಹಾರಿ, ಕೊಡ್ಲಿ ತೆಗೆದುಕೊಂಡು ತಗ್ಗು ತೆಗೆಯುತ್ತಿರುವುದನ್ನು ನೋಡಿದ ಚಾಸಾ-1, 6 ಮತ್ತು 7 ರವರು ಏಕೆ ಈ ಜಾಗದಲ್ಲಿ ಗುದ್ದು ತೆಗೆಯುತ್ತಿದ್ದೀರಿ ಅಂತಾ ಕೇಳಿದಾಗ, ಈ ಜಾಗ ನಮ್ಮದು ಅಂತಾ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 189(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, ದೊಂಬಿ ಎಬ್ಬಿಸಿದ್ದು ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 191(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, ಕೈಯಲ್ಲಿ ಮಾರಕಾಸ್ತ್ರಗಳಾದ ಸಲಿಗೆ, ಗುದ್ಲಿ, ಹಾರಿ ಮತ್ತು ಕೊಡ್ಲಿ ಹಿಡಿದುಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 191(3) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

4. ನಾಲ್ಕನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, 7 ನೇ ಆರೋಪಿಯಾದ ನೀವು ಚಾಸಾ-6 ರವರಿಗೆ ಕೈಯಿಂದ ಹೊಡಿ-ಬಡಿ ಮಾಡಿದ್ದು, 5 ನೇ ಆರೋಪಿಯಾದ ನೀವು ಚಾಸಾ-1 ರವರ ತೊಡೆಗೆ ಒದ್ದು ಗಾಯಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 115(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

5. ಐದನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, 1 ನೇ ಆರೋಪಿಯಾದ ನೀವು ಚಾಸಾ-7 ರವರಿಗೆ ಹಾರಿಯಿಂದ ಬಲಭಾಗದ ತಲೆಗೆ ಹೊಡೆದು ರಕ್ತಗಾಯವಾಗುವಂತೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 118(1) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

6. ಆರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, ಅವರಿಗೆ ಅವಮಾನಮಾಡುವ ಉದ್ದೇಶದಿಂದ 7 ನೇ ಆರೋಪಿಯಾದ ನೀವು ಚಾಸಾ–6 ರವರಿಗೆ ಚಪ್ಪಲಿಯಿಂದ ತಲೆಗೆ ಹೊಡೆದಿದ್ದು, ಬಿಡಿಸಲು ಬಂದ ಚಾಸಾ–1 ಮತ್ತು 7 ರವರಿಗೂ ಸಹ ಚಪ್ಪಲಿಯಿಂದ ಬಲ ಭುಜಕ್ಕೆ ಮತ್ತು ಬೆನ್ನಿಗೆ ಹೊಡೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ 133 ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

7. ಏಳನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, 7 ನೇ ಆರೋಪಿಯಾದ ನೀವು ಚಾಸಾ–6 ರವರ ಜಂಪರ್ ಹಿಡಿದು ಎಳೆದಾಡಿ ಹರಿದು, ಚಪ್ಪಲಿಯಿಂದ ತಲೆಗೆ ಹೊಡೆದಿದ್ದು, 2 ನೇ ಆರೋಪಿಯಾದ ನೀವು ಚಾಸಾ–7 ರವರ ಎದೆಯ ಮೇಲಿನ ಅಂಗಿಯನ್ನು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು, ಕಾಲುಗಳಿಂದ ಒದ್ದು, ಸಾರ್ವಜನಿಕವಾಗಿ ಮಹಿಳೆಯ ಗೌರವಕ್ಕೆ ಧಕ್ಕೆಯನ್ನುಂಟುಮಾಡಿ ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್–2023 ಕಲಂ 79 ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

8. ಎಂಟನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, ತಾಯಿನ ಹಡಾ, ಸೂಳೇ ಮಕ್ಕಳಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್–2023 ಕಲಂ 352 ಸಹ ಕಲಂ 190 ರಡಿಯಲ್ಲಿ

ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ. 7

9. ಒಂಭತ್ತನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 6 ಮತ್ತು 7 ರವರೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಾಡಿ, ಹೊಡಿ-ಬಡಿ ಮಾಡಿದ್ದಲ್ಲದೇ, ಈ ಜಾಗ ನಮ್ಮದು ಇನ್ನೊಮ್ಮೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್-2023 ಕಲಂ 351(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

10. ಹತ್ತನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 7 ನೇ ಆರೋಪಿತರಾದ ನೀವು ಹಿಂದೂ ಕುರುಬ ಜಾತಿಗೆ ಸೇರಿದ್ದು, ಚಾಸಾ-1, 6 ಮತ್ತು 7 ರವರು ಹಿಂದೂ ವಾಲ್ಮೀಕಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಅಂತಾ ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು ಕೀಳು ಬ್ಯಾಡ ವಾಲ್ಮೀಕಿ ಜಾತಿ ಸೂಳೇ ಮಕ್ಕಳಾ ಅಂತಾ ಸಾರ್ವಜನಿಕವಾಗಿ ಜಾತಿ ಎತ್ತಿ ಬೈದು ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ. 3(1)(r) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

11. ಹನ್ನೊಂದನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 7 ನೇ ಆರೋಪಿತರಾದ ನೀವು ಹಿಂದೂ ಕುರುಬ ಜಾತಿಗೆ ಸೇರಿದ್ದು, ಚಾಸಾ-1, 6 ಮತ್ತು 7 ರವರು ಹಿಂದೂ ವಾಲ್ಮೀಕಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಅಂತಾ ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು ಕೀಳು ಬ್ಯಾಡ ವಾಲ್ಮೀಕಿ ಜಾತಿ ಸೂಳೇ ಮಕ್ಕಳಾ ಅಂತಾ ಸಾರ್ವಜನಿಕವಾಗಿ ಸಾರ್ವಜನಿಕರು ಕೇಳುವ ರೀತಿಯಲ್ಲಿ ಜಾತಿ ಎತ್ತಿ ಬೈದು ಅವಮಾನಪಡಿಸಿದ್ದು,

ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ. 3(1)(S) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

12. ಹನ್ನೆರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 7 ನೇ ಆರೋಪಿತರಾದ ನೀವು ಹಿಂದೂ ಕುರುಬ ಜಾತಿಗೆ ಸೇರಿದ್ದು, ಚಾಸಾ-1, 6 ಮತ್ತು 7 ರವರು ಹಿಂದೂ ವಾಲ್ಮೀಕಿ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಅಂತಾ ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು ಕೀಳು ಬ್ಯಾಡ ವಾಲ್ಮೀಕಿ ಜಾತಿ ಸೂಳೇ ಮಕ್ಕಳಾ ಅಂತಾ ಸಾರ್ವಜನಿಕವಾಗಿ ಜಾತಿ ಎತ್ತಿ ಬೈದು ಅವಮಾನಪಡಿಸಿ, ಹೊಡಿ-ಬಡಿ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ. 3(2)(va) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಣೆಗಳಿಗಾಗಿ ಹಾವೇರಿ ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಿಮ್ಮ ಮೇಲೆ ಮೊಕದ್ದಮೆ ನಡೆಯತಕ್ಕದ್ದು ಅಂತಾ ಆದೇಶಿಸಿದ್ದೇನೆ.

ದಿನಾಂಕಃ05.02.2026
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು,
ಹಾವೇರಿ